# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ-144/ವಾರ್ಡ್ ಸಭೆ/2020-21 ದಿನಾಂಕ:20/02/2021

## ವಾರ್ಡ್ -144ರ ವಾರ್ಡ್ ಸಭೆಯ ನಡವಳಿ

ದಿನಾಂಕ:20/02/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್-144ರ ವಾರ್ಡ್ ಕಛೇರಿಯಲ್ಲಿ (ದಕ್ಷಿಣ ವಲಯ) ವಾರ್ಡ್ 144-ಸಿದ್ದಾಪುರ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ನರಸರಾಮರಾವ್ | ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) | ಹಾಜರಿದ್ದರು |
| 2 | ಶ್ರೀ. ಚಂದ್ರಶೇಖರ್ ನಾಯಕ್ | ಕಿರಿಯ ಅಭಿಯಂತರರು Project-Central-4 | ಹಾಜರಿದ್ದರು |
| 3 | ಶ್ರೀಮತಿ. ಶಿಲ್ಪ ಎಸ್, | ಸಹಾಯಕ ಅಭಿಯಂತರರು SWD BBMP | ಹಾಜರಿದ್ದರು |
| 4 | ಶ್ರೀ. ಟಿ. ರಾಮ್‌ದಾಸ್ | ಸಹಾಯಕ ಕಂದಾಯ ಅಧಿಕಾರಿ ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 5 | ಶ್ರೀ. ಎಂ.ಎಂ. ಬಾಬು | ಕಂದಾಯ ಪರಿವೀಕ್ಷಕರು ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 6 | ಶ್ರೀ. ಸುನಿಲ್‌ಕುಮಾರ್ | ಸಹಾಯಕ ಅಭಿಯಂತರರು BWSSB | ಹಾಜರಿದ್ದರು |
| 7 | ಶ್ರೀ. ಸಲ್ಮಾನ್ ಖಾನ್ | ಸಹಾಯಕ ಅಭಿಯಂತರರು BWSSB | ಹಾಜರಿದ್ದರು |
| 8 | ಶ್ರೀ. ಕೆ.ಆರ್. ರಾಮಣ್ಣ | ಎ.ಎಸ್.ಐ ಸಿದ್ದಾಪುರ ಪೊಲೀಸ್ ಠಾಣೆ | ಹಾಜರಿದ್ದರು |
| 9 | ಶ್ರೀ. ಸೋಮಶೇಖರ್ ಜಿ. | ಪಿ.ಎಸ್.ಐ (ಜಯನಗರ ಸಂಚಾರ ಪೊಲೀಸ್ ಠಾಣೆ) | ಹಾಜರಿದ್ದರು |
| 10 | ಕುಮಾರಿ. ಸುರೇಖ ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |
| 11 | ಶ್ರೀ. ಪೂರ್ಣೇಶ್ | ಮಾರ್ಷಲ್ | ಹಾಜರಿದ್ದರು |

ಮು.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀಮತಿ. ಮರಗತವಳ್ಳಿ | ಮಾಜಿ ಸದಸ್ಯರು | ಹಾಜರಿದ್ದರು |
| 2 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಮಂಜುನಾಥ | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ಅಶೋಕ್ ಜಿ. | ಸ್ಥಳೀಯರು | ಹಾಜರಿದ್ದರು |
| 5 | ಶ್ರೀ. ತೇಜಸ್ ಎ. ಗೌಡ | ಸ್ಥಳೀಯರು | ಹಾಜರಿದ್ದರು |
| 6 | ಶ್ರೀ. ಸುಮಂತ್ ಎಸ್. | ಸ್ಥಳೀಯರು | ಹಾಜರಿದ್ದರು |
| 7 | ಶ್ರೀ. ಜಯರಾಮ್ ಎಂ.ಜಿ | ಸ್ಥಳೀಯರು | ಹಾಜರಿದ್ದರು |
| 8 | ಶ್ರೀ. ಸತೀಶ್ ಎಸ್. | ಸ್ಥಳೀಯರು | ಹಾಜರಿದ್ದರು |
| 9 | ಶ್ರೀ. ಕೆಂಪರಾಜು ಓ. | ಸ್ಥಳೀಯರು | ಹಾಜರಿದ್ದರು |
| 10 | ಶ್ರೀ. ಅಬ್ದುಲ್ ಸಾಜಿದ್ | ಸ್ಥಳೀಯರು | ಹಾಜರಿದ್ದರು |
| 11 | ಶ್ರೀ. ಅಜ್ಮಲ್ ಖಾನ್ | ಸ್ಥಳೀಯರು | ಹಾಜರಿದ್ದರು |
| 12 | ಶ್ರೀ. ಸ್ವರೂಪ್ ಆರ್. | ಸ್ಥಳೀಯರು | ಹಾಜರಿದ್ದರು |
| 13 | ಶ್ರೀಮತಿ. ಕವಿತ | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಸದಸ್ಯರು ಮತ್ತು ಸ್ಥಳೀಯರು ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಟಿ. ಮರಿಯಪ್ಪ ರಸ್ತೆಯಲ್ಲಿ ಪ್ರಗತಿಯಲ್ಲಿರುವ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡ ನಂತರ ರಸ್ತೆ ಉಬ್ಬನ್ನು ಹಾಕುವಂತೆ ಕೋರಿರುತ್ತಾರೆ. ವಿಷಯವಾಗಿ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಬಿಬಿಎಂಪಿ ವೈಟ್ ಟಾಪಿಂಗ್ ಕಿರಿಯ ಅಭಿಯಂತರರಿಗೆ ಹಾಗೂ ಸಂಚಾರ ಪೊಲೀಸ್ ಠಾಣೆಯ ಸೋಮಶೇಖರ್ ಜಿ. ರವರಿಗೆ ಕ್ರಮ ವಹಿಸಲು ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಪಳೇಕಮ್ಮ ದೇವಸ್ಥಾನದ ಹತ್ತಿರ ಮಳೆಗಾಲದಲ್ಲಿ ಮಳೆನೀರು ಸರಾಗವಾಗಿ ಹರಿಯಲು ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ. ಅದರಂತೆ ಅಧ್ಯಕ್ಷರು ಸಂಬಂಧಪಟ್ಟ ಬಿಬಿಎಂಪಿ ವೈಟ್ ಟಾಪಿಂಗ್ ಕಿರಿಯ ಅಭಿಯಂತರರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಹೋಟೆಲ್ ಮತ್ತು ಲಾಡ್ಜ್‌ಗಳಲ್ಲಿ ಕೋವಿಡ್ ಪರೀಕ್ಷೆ ನಡೆಸಲು ಕೋರಿದರು. ಆದರೆ ಅಧ್ಯಕ್ಷರು ಮಾತನಾಡಿ ಆರೋಗ್ಯ ವಿಭಾಗದವರು ಸಭೆಗೆ ಗೈರುಹಾಜರಾಗಿರುವುದರಿಂದ ಈ ವಿಷಯವಾಗಿ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ತಿಳಿಸಿದರು.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್‌ನ ಸಿಲ್ಟ್ ಅಂಡ್ ಟ್ರ್ಯಾಕ್ಟರ್ ಬಗ್ಗೆ ವಿವರಣೆಯನ್ನು ಕೋರಿರುವ ಹಿನ್ನೆಲೆಯಲ್ಲಿ ವಾರ್ಡಿನ ಅಭಿಯಂತರರು ಗೈರುಹಾಜರಾಗಿರುವುದರಿಂದ ಈ ವಿಷಯವಾಗಿ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪತಿಯಲ್ಲಿ ಸಿ.ಸಿ. ಟಿವಿ ಅಳವಡಿಸಲು ಹಲವಾರು ಬಾರಿ ಕೋರಿರುವ ಹಿನ್ನೆಲೆಯಲ್ಲಿ ವಿದ್ಯುತ್ ವಿಭಾಗದವರು ಗೈರುಹಾಜರಾಗಿರುವುದರಿಂದ ಈ ವಿಷಯವಾಗಿ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಹಲವಾರು ದೊಡ್ಡ ಮಳೆನೀರು ಚರಂಡಿಗಳಿದ್ದು, (SWD) ಸದರಿ ಚರಂಡಿಯನ್ನು ಹೊಂದಿಕೊಂಡಂತೆ ಹಾಗೂ ಒತ್ತುವರಿ ಮಾಡಿಕೊಂಡು ಕಟ್ಟಡಗಳು ನಿರ್ಮಾಣವಾಗಿರುವ ಬಗ್ಗೆ ದೂರು ನೀಡಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಶಿಲ್ಪಾ ಎನ್. ರವರಿಗೆ ಈ ಬಗ್ಗೆ ಕ್ರಮ ವಹಿಸಲು ಅಧ್ಯಕ್ಷರು ಸೂಚಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಹಲವಾರು ದೊಡ್ಡ ಮಳೆನೀರು ಚರಂಡಿಗಳಿದ್ದು, (SWD) ಸದರಿ ಚರಂಡಿಯನ್ನು ಹೊಂದಿಕೊಂಡಂತೆ ಹಾಗೂ ಒತ್ತುವರಿ ಮಾಡಿಕೊಂಡು ಕಟ್ಟಡಗಳು ನಿರ್ಮಾಣವಾಗಿರುವ ಬಗ್ಗೆ ದೂರು ನೀಡಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಶಿಲ್ಪಾ ಎನ್. ರವರಿಗೆ ಈ ಬಗ್ಗೆ ಕ್ರಮ ವಹಿಸಲು ಅಧ್ಯಕ್ಷರು ಸೂಚಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಆರೋಗ್ಯದ ಹಿತದೃಷ್ಟಿಯಿಂದ ಕೋವಿಡ್‌ಗೆ ಸಿಂಪಡಿಸಿದ ಔಷಧಿಯನ್ನು ಮತ್ತೊಮ್ಮೆ ಸಿಂಪಡಿಸಲು ಕೋರಿದರು. ಅದರಂತೆ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಗೆ ಅಧ್ಯಕ್ಷರು ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಮುಂದಿನ ವಾರದಲ್ಲಿ ರಾಘವೇಂದ್ರ ಕಾಲೋನಿಯಲ್ಲಿರುವ ಕಲ್ಯಾಣಿಯನ್ನು ಸ್ವಚ್ಛಗೊಳಿಸಿಕೊಡಲು ಕೋರಿರುವ ಹಿನ್ನೆಲೆಯಲ್ಲಿ ಅಧ್ಯಕ್ಷರು ಸಾಮೂಹಿಕ ಸ್ವಚ್ಚತಾ ಕಾರ್ಯ ಕೈಗೊಂಡು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ಪ್ರದೇಶದ ರಸ್ತೆಗಳ ಗುರುತನ್ನು ತಿಳಿಸಲು ಅಳವಡಿಸಲಾಗುವ ನಾಮಫಲಕಗಳಲ್ಲಿ ಸರ್ಕಾರದ ಅಧಿಸೂಚನೆಯಂತೆ ನಾಮಫಲಕವನ್ನು ಅಳವಡಿಸಲು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಉತ್ತರಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಸೋಮೇಶ್ವರ ಕಾಲೋನಿಯ 6ನೇ ಅಡ್ಡರಸ್ತೆಯಲ್ಲಿ ನಡೆಯುತ್ತಿರುವ ಕಾಂಕ್ರಿಟ್ ಅಳವಡಿಸುವ ಕಾಮಗಾರಿಯನ್ನು ಹಾಗೂ ವಾರ್ಡಿನ ಪಾಲಿಕೆಯ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಉತ್ತರಿಸಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ವಾರ್ಡಿನ ಅಭಿಯಂತರರಿಗೆ ತಿಳಿಸುವುದಾಗಿ ಸಭೆಗೆ ಹೇಳಿದರು.

ಪು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಮರಿಯಮ್ಮ ದೇವಸ್ಥಾನದ ಸುತ್ತಮುತ್ತಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲವೆಂದು ತಿಳಿಸಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಹಾಜರಾಗಿ ಅಧಿಕಾರಿಗಳಿಗೆ ಈ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರೊಂದಿಗೆ ವಾರ್ಡ್ ಕಮಿಟಿ ಅಧ್ಯಕ್ಷರು ಮಾತನಾಡಿ ಸಭೆಯ ಮುಂದೆ ಶ್ರೀ. ಬಾಬು ವೈ. ರವರ ಒಂಟಿ ಮನೆ ನಿರ್ಮಾಣ ಮಾಡಿಕೊಳ್ಳುವ ಕಡತಕ್ಕೆ ಸಭೆಯ ಒಪ್ಪಿಗೆ ಕೋರಿದರು. ಅದರಂತೆ ಸಭೆಯಲ್ಲಿ ಹಾಜರಿದ್ದ ಎಲ್ಲರೂ ಒಪ್ಪಿಗೆ ಸೂಚಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಪಳೇಕಮ್ಮ ದೇವಸ್ಥಾನ ಜೀರ್ಣೋದ್ಧಾರ ಮಾಡುವ ಬಗ್ಗೆ ಕೋರಿದರು. ಈ ವಿಷಯವಾಗಿ ಸಂಬಂಧಪಟ್ಟ ಇಲಾಖೆಯವರಿಗೆ ಈ ಬಗ್ಗೆ ತಿಳಿಸುವುದಾಗಿ ಸಭೆಗೆ ಉತ್ತರಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಬಾಸ್ಕೆಟ್ ಬಾಲ್ ಕೋರ್ಟ್‌ನ್ನು ಸಾರ್ವಜನಿಕರಿಗಾಗಿ ಅಭಿವೃದ್ಧಿ ಪಡಿಸಲು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಪ್ರತಿಕ್ರಿಯಿಸಿ ಈಗಾಗಲೇ ಟೆಂಡರ್ ಕರೆ ಮಾಡಲಾಗಿರುವುದಾಗಿ ಸಭೆಗೆ ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಮುರಳಿ ಸ್ಲಂನಲ್ಲಿರುವ ಆರ್.ಓ. ಪ್ಲಾಂಟ್ ಸ್ಥಗಿತಗೊಂಡಿದ್ದು, ಕೂಡಲೇ ಸರಿಪಡಿಸುವಂತೆ ಕೋರಿದರು ಹಾಗೂ ಶ್ರೀರಾಮ ದೇವಸ್ಥಾನ ಹಾಗೂ ಮರಿಯಮ್ಮ ದೇವಸ್ಥಾನದ ಹತ್ತಿರ ಇರುವ ಬೋರ್‌ವೆಲ್‌ಗಳನ್ನು ಸರಿಪಡಿಸುವಂತೆ ಕೋರಿದರು ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ವಾರ್ಡಿನ ಅಭಿಯಂತರರು ಗೈರುಹಾಜರಾಗಿರುವುದರಿಂದ ಮುಂದಿನ ಸಭೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡಿನ ಅಭಿಯಂತರರಿಗೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯ ಮುಖ್ಯರಸ್ತೆಗಳಲ್ಲಿ ಅನಧಿಕೃತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಕೋರಿದರು. ಅದರಂತೆ ಪೋಲೀಸ್ ಸಹಾಯಕ ಆಯುಕ್ತರು (ದಕ್ಷಿಣ) ಮತ್ತು DCP (ಪಶ್ಚಿಮ) ರವರಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಪೌರಕಾರ್ಮಿಕರನ್ನು ಹೆಚ್ಚಿಸಲು ಕೋರಿದರು. ಅದರಂತೆ ಕ್ರಮ ತೆಗೆದುಕೊಳ್ಳುವುದಾಗಿ ಸಭೆಗೆ ಅಧ್ಯಕ್ಷರು ತಿಳಿಸಿದರು.

ಪು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಮಾಂಸ ಮಾರಾಟದ ಅಂಗಡಿಯ ಹೊರಗಡೆ ಮಾಂಸದ ಪ್ರದರ್ಶನ ಮಾಡದೆ ಅಂಗಡಿಯ ಒಳಗಡೆ ಮಾಂಸವನ್ನು ಇಟ್ಟುಕೊಂಡು ಮಾರಾಟ ಮಾಡಬೇಕೆಂದು ಕೋರಿದರು. ಈ ವಿಷಯವನ್ನು ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆ ನೀಡಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

([illegible])
29/2/24
ನೋಡಲ್ ಅಧಿಕಾರಿ
ವಾರ್ಡ್-144 ಸಿದ್ದಾಪುರ



Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(ಆ)ಪಿಆರ್/ 35 /20-21

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 16/2/21

## ಸುತ್ತೋಲೆ

ವಿಷಯ: ವಿಶೇಷ ವಾರ್ಡ್ ಸಮಿತಿ ಸಭೆಯನ್ನು ನಡೆಸುವ ಬಗ್ಗೆ.

-------

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸಿ, ದಿನಾಂಕ: 21-09-2020, 02-10-2020 ಮತ್ತು 02-11-2020ರ ಆದೇಶಗಳಂತೆ ಪಾಲಿಕೆಯ ಪ್ರತಿ ವಾರ್ಡ್‌ಗೆ ಒಬ್ಬ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. ಅದರಂತೆ ನೋಡಲ್ ಅಧಿಕಾರಿಗಳು ಸಾರ್ವಜನಿಕರ ಕುಂದು ಕೊರತೆ ನಿವಾರಣೆಗಾಗಿ, 1ನೇ ಮತ್ತು 3ನೇ ಶನಿವಾರ ಸಭೆ ಸೇರಿ, ಘನತ್ಯಾಜ್ಯ ನಿರ್ವಹಣೆ, ರಸ್ತೆಗಳ ನಿರ್ವಹಣೆ, ಮಳೆಯಿಂದ ಉಂಟಾಗುವ ಪ್ರವಾಹ, ತುರ್ತು ಕೆಲಸಗಳು, ವಿದ್ಯುತ್ ಬೀದಿ ದೀಪಗಳು ನಿರ್ವಹಣೆ, ಉದ್ಯಾನವನ ನಿರ್ವಹಣೆ, ಆಸ್ತಿ ತೆರಿಗೆ ವಸೂಲಾತಿ, ಸಾರ್ವಜನಿಕರ ಕುಂದು ಕೊರತೆ ನಿವಾರಣೆ, ಇತರೆ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತಿರುತ್ತದೆ.

ಅದರಂತೆ, ಫೆಬ್ರವರಿ-2021ರ 3ನೇ ವಾರದಲ್ಲಿ ನಡೆಯುವ 198 ವಾರ್ಡ್‌ಗಳ ವಾರ್ಡ್ ಕಮಿಟಿ ಸಭೆಯಲ್ಲಿ ವಿಶೇಷವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021-22ನೇ ಸಾಲಿನ ಆಯವ್ಯಯ ಸಿದ್ಧತೆಯ ಪೂರ್ವದಲ್ಲಿ ಆಯವ್ಯಯಕ್ಕೆ ಪೂರಕವಾದ ಸಲಹೆ/ಸೂಚನೆ" ಗಳ ವಿಷಯಕ್ಕೆಂದು ಮೀಸಲಿಟ್ಟು, ವಿಶೇಷ ವಾರ್ಡ್ ಸಮಿತಿ ಸಭೆಯನ್ನು ನಡೆಸಲು ಹಾಗೂ ಸಭೆಯಲ್ಲಿ ವ್ಯಕ್ತಪಡಿಸುವ ಸಲಹೆ ಸೂಚನೆಗಳನ್ನು ಕ್ರೋಢೀಕರಿಸಿ ನಡವಳಿಯೊಂದಿಗೆ ವಿಶೇಷ ಆಯುಕ್ತರು (ಹಣಕಾಸು) ರವರಿಗೆ ಸಲ್ಲಿಸಲು ಎಲ್ಲಾ ವಾರ್ಡ್ ನೋಡಲ್ ಅಧಿಕಾರಿಗಳಿಗೆ ಸೂಚಿಸಿದೆ.

ವಿಶೇಷ ಆಯುಕ್ತರು (ಆಡಳಿತ) ರವರ
ಆದೇಶದ ಮೇರೆಗೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಎಲ್ಲಾ ವಾರ್ಡ್‌ಗಳ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಕಛೇರಿ ಪ್ರತಿ

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ–144/ವಾರ್ಡ್ ಸಭೆ/2020–21 ದಿನಾಂಕ:20/02/2021

## ವಾರ್ಡ್ –144ರ ವಿಶೇಷ ವಾರ್ಡ್ ಸಮಿತಿಯ ಸಭೆ

ದಿನಾಂಕ:20/02/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್–144ರ ವಾರ್ಡ್ ಕಛೇರಿಯಲ್ಲಿ ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಸುತ್ತೋಲೆ ಸಂಖ್ಯೆ:ಬಿ12(5)ಪಿಆರ್/35/20–21, ದಿನಾಂಕ:16–02–2021 ರಲ್ಲಿ ಸೂಚಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021–22ನೇ ಸಾಲಿನ ಆಯವ್ಯಯ ಸಿದ್ಧತೆಯ ಪೂರ್ವದಲ್ಲಿ ಆಯವ್ಯಯಕ್ಕೆ ಪೂರಕವಾಗಿ ಸಲಹೆ/ಸೂಚನೆ ಗಳಿಗಾಗಿ ನಡೆದ ವಿಶೇಷ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ನರಸರಾಮರಾವ್ | ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) | ಹಾಜರಿದ್ದರು |
| 2 | ಶ್ರೀ. ಚಂದ್ರಶೇಖರ್ ನಾಯಕ್ | ಕಿರಿಯ ಅಭಿಯಂತರರು Project-Central-4 | ಹಾಜರಿದ್ದರು |
| 3 | ಶ್ರೀಮತಿ. ಶಿಲ್ಪ ಎಸ್, | ಸಹಾಯಕ ಅಭಿಯಂತರರು SWD BBMP | ಹಾಜರಿದ್ದರು |
| 4 | ಶ್ರೀ. ಟಿ. ರಾಮ್‌ದಾಸ್ | ಸಹಾಯಕ ಕಂದಾಯ ಅಧಿಕಾರಿ ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 5 | ಶ್ರೀ. ಎಂ.ಎಂ. ಬಾಬು | ಕಂದಾಯ ಪರಿವೀಕ್ಷಕರು ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 6 | ಶ್ರೀ. ಸುನಿಲ್‌ಕುಮಾರ್ | ಸಹಾಯಕ ಅಭಿಯಂತರರು BWSSB | ಹಾಜರಿದ್ದರು |
| 7 | ಶ್ರೀ. ಸಲ್ಮಾನ್ ಖಾನ್ | ಸಹಾಯಕ ಅಭಿಯಂತರರು BWSSB | ಹಾಜರಿದ್ದರು |
| 8 | ಶ್ರೀ. ಕೆ.ಆರ್. ರಾಮಣ್ಣ | ಎ.ಎಸ್.ಐ ಸಿದ್ದಾಪುರ ಪೊಲೀಸ್ ಠಾಣೆ | ಹಾಜರಿದ್ದರು |
| 9 | ಶ್ರೀ. ಸೋಮಶೇಖರ್ ಜಿ. | ಪಿ.ಎಸ್.ಐ (ಜಯನಗರ ಸಂಚಾರ ಪೊಲೀಸ್ ಠಾಣೆ) | ಹಾಜರಿದ್ದರು |
| 10 | ಕುಮಾರಿ. ಸುರೇಖ ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |
| 11 | ಶ್ರೀ. ಪೂರ್ಣೇಶ್ | ಮಾರ್ಷಲ್ | ಹಾಜರಿದ್ದರು |

ಪು.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀಮತಿ. ಮರಗತವಳ್ಳಿ | ಮಾಜಿ ಸದಸ್ಯರು | ಹಾಜರಿದ್ದರು |
| 2 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಮಂಜುನಾಥ | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ಅಶೋಕ್ ಜಿ. | ಸ್ಥಳೀಯರು | ಹಾಜರಿದ್ದರು |
| 5 | ಶ್ರೀ. ತೇಜಸ್ ಎ. ಗೌಡ | ಸ್ಥಳೀಯರು | ಹಾಜರಿದ್ದರು |
| 6 | ಶ್ರೀ. ಸುಮಂತ್ ಎಸ್. | ಸ್ಥಳೀಯರು | ಹಾಜರಿದ್ದರು |
| 7 | ಶ್ರೀ. ಜಯರಾಮ್ ಎಂ.ಜಿ | ಸ್ಥಳೀಯರು | ಹಾಜರಿದ್ದರು |
| 8 | ಶ್ರೀ. ಸತೀಶ್ ಎಸ್. | ಸ್ಥಳೀಯರು | ಹಾಜರಿದ್ದರು |
| 9 | ಶ್ರೀ. ಕೆಂಪರಾಜು ಓ. | ಸ್ಥಳೀಯರು | ಹಾಜರಿದ್ದರು |
| 10 | ಶ್ರೀ. ಅಬ್ದುಲ್ ಸಾಜಿದ್ | ಸ್ಥಳೀಯರು | ಹಾಜರಿದ್ದರು |
| 11 | ಶ್ರೀ. ಅಜ್ಮಲ್ ಖಾನ್ | ಸ್ಥಳೀಯರು | ಹಾಜರಿದ್ದರು |
| 12 | ಶ್ರೀ. ಸ್ವರೂಪ್ ಆರ್. | ಸ್ಥಳೀಯರು | ಹಾಜರಿದ್ದರು |
| 13 | ಶ್ರೀಮತಿ. ಕವಿತ | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಸದಸ್ಯರು ಮತ್ತು ಸ್ಥಳೀಯರು ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ವಿಶೇಷ ಸಭೆಯನ್ನು ಪ್ರಾರಂಭಿಸಲಾಯಿತು. ಈ ಸಭೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021–22ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್‌ನ ಅವಶ್ಯಕತೆಗೆ ಸಂಬಂಧಪಟ್ಟಂತೆ ಚರ್ಚಿಸಲಾಗಿ ಈ ಕೆಳಕಂಡ ಸೌಕರ್ಯಗಳನ್ನು ಕಲ್ಪಿಸಲು ಅಗತ್ಯ ಅನುದಾನ ಒದಗಿಸುವಂತೆ ಕೋರಲಾಯಿತು.

- ವಾರ್ಡ್ 144ರ ವ್ಯಾಪ್ತಿಯಲ್ಲಿ ಬಹು ಉಪಯೋಗಿ ಜನರಲ್ ಆಸ್ಪತ್ರೆ ಅವಶ್ಯಕತೆ ಇರುತ್ತದೆ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಅಂಚೆ ಕಛೇರಿ ಅವಶ್ಯಕತೆ ಇರುತ್ತದೆ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಬ್ಯಾಂಕ್‌ಗಳ ಕೊರತೆ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಬೆಂಗಳೂರು ಒನ್ ವ್ಯವಸ್ಥೆ ಕಲ್ಪಿಸುವುದು.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಒಂಟಿ ಮನೆ ಫಲಾನುಭವಿಗಳಿಗೆ ಈಗ ನೀಡುತ್ತಿರುವ ಅನುದಾನ ಕಡಿಮೆ ಇದ್ದು ಅದನ್ನು ಹೆಚ್ಚಿಸಲು ಕೋರಿಕೆ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿಯವರ ಜನ ಔಷದಿ ಮಳಿಗೆ ಅವಶ್ಯಕತೆ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಗ್ರಂಥಾಲಯದ ಅವಶ್ಯಕತೆ.
- ವಾರ್ಡ್ 144ರ ವ್ಯಾಪ್ತಿಯ ಐದು ಕಡೆಗಳಲ್ಲಿ ಪೊಲೀಸ್ ಚೌಕಿಗಳ ಅವಶ್ಯಕತೆ.
- ವಾರ್ಡ್ 144ರ ವ್ಯಾಪ್ತಿಯ ದೇವಸ್ಥಾನಗಳಾದ ಸಿದ್ದಾಪುರದ ಶ್ರೀ ಯಲ್ಲಮ್ಮ ದೇವಿ ದೇವಸ್ಥಾನ ಹಾಗೂ ಶ್ರೀ ಸೋಮೇಶ್ವರ ದೇವಸ್ಥಾನ ವಾಂಬೆ ಕ್ವಾಟ್ರಸ್‌ನ ಶ್ರೀ ಮರಿಯಮ್ಮ ದೇವಿ ದೇವಸ್ಥಾನ, ಸುಬ್ರಮಣ್ಯ ಡಿಪೋ ಹತ್ತಿರ ಇರುವ ಶ್ರೀ ಮರಿಯಮ್ಮ ದೇವಸ್ಥಾನ, ಗುಟ್ಟೇಪಾಳ್ಯದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಮುರಳಿ ಕಾಲೋನಿಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಗಳ ಅಭಿವೃದ್ಧಿ ಪಡಿಸುವುದು.



Scanned with CamScanner

- ವಾರ್ಡ್ 144ರ ವ್ಯಾಪ್ತಿಯಲ್ಲಿರುವ ಹಳೆಯ ನೀರಿನ ಮತ್ತು ಒಳಚರಂಡಿಯ ಕೊಳವೆಗಳ ಬದಲಾವಣೆ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಸಮುಧಾಯ ಭವನ ನಿರ್ಮಾಣ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಹಳೆಯ ವಿದ್ಯುತ್ ಕಂಬಗಳ ಬದಲಾವಣೆ.
- ವಾರ್ಡ್ 144ರ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಹೊಸ ತಳ್ಳುವ ಗಾಡಿಗಳ ವ್ಯವಸ್ಥೆ.
- ವಾರ್ಡ್ 144ರ ವ್ಯಾಪ್ತಿಯ ಯುವಕರಿಗೆ ಆಟದ ಸಲಕರಣೆಗಳ ವ್ಯವಸ್ಥೆ.
- ವಾರ್ಡ್ 144ರ ವ್ಯಾಪ್ತಿಯ ಮುಖ್ಯ ರಸ್ತೆಗಳಿಗೆ Ornamental Lights ವ್ಯವಸ್ಥೆ.
- ವಾರ್ಡ್ 144ರ ವ್ಯಾಪ್ತಿಯ ಸಾರ್ವಜನಿಕರಲ್ಲಿ IEC Activity ಅಡಿಯಲ್ಲಿ ಸ್ವಚ್ಛತೆ, ಕಸ ವಿಂಗಡಣೆ, ನೈರ್ಮಲ್ಯ ಕಾಪಾಡುವ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.
- ವಾರ್ಡ್ 144ರ ವ್ಯಾಪ್ತಿಯಲ್ಲಿರುವ ಕಲ್ಯಾಣಿಯನ್ನು ಅಭಿವೃದ್ಧಿಪಡಿಸುವುದು.
- ವಾರ್ಡ್ 144ರ ವ್ಯಾಪ್ತಿಯಲ್ಲಿರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು.
- ವಾರ್ಡ್ 144ರ ವ್ಯಾಪ್ತಿಯ ಸೋಮೇಶ್ವರ ಮುಖ್ಯರಸ್ತೆಯ ಮುಖ್ಯ ದ್ವಾರದ ಹತ್ತಿರ ಸಿಗ್ನಲ್ ಲೈಟ್‌ಗಳ ಅವಶ್ಯಕತೆ.

ಮೇಲಿನಂತೆ ಸಾರ್ವಜನಿಕರು ನೀಡಿರುವ ಸಲಹೆಗಳನ್ನು ಮತ್ತು ಬೇಡಿಕೆಗಳನ್ನು ಮಾನ್ಯ ಆಯುಕ್ತರ ಅವಗಾಹನೆಗೆ ಸಲ್ಲಿಸುವುದಾಗಿ ತಿಳಿಸುತ್ತಾ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯನ್ನು ಮಕ್ತಾಯಗೊಳಿಸಲಾಯಿತು.

20/2/21

(ಬಿ.ಎಲ್. ನರಸರಾಮರಾವ್)
ಅಧೀಕ್ಷಕ ಅಭಿಯಂತರರು (ದಕ್ಷಿಣ)
ಮತ್ತು ನೋಡಲ್ ಅಧಿಕಾರಿ
ವಾರ್ಡ್–144 ಸಿದ್ದಾಪುರ

ಪ್ರತಿಯನ್ನು:-

1. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಬಿಬಿಎಂಪಿ ರವರ ಅವಗಾಹನೆಗೆ ಮಂಡಿಸಿದೆ.
2. ಮಾನ್ಯ ಉಪ ಆಯುಕ್ತರು (ಆಡಳಿತ) ಬಿಬಿಎಂಪಿ ರವರ ಅವಗಾಹನೆಗೆ ಮಂಡಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ಬಿಬಿಎಂಪಿ ರವರ ಅವಗಾಹನೆಗೆ ಮಂಡಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ) ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
5. ಸ.ಕಾ.ನಿ.ಅ (ಹೊಂಬೇಗೌಡನಗರ) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
6. ಕಛೇರಿ ಕಡತಕ್ಕೆ.



Scanned with CamScanner